

"ಅಮ್ಮಾ."

"ಹೇಳೇ. ರಾಗ ಎಳೀಬೇಡ."

"ಅಪ್ಪ ಬಂದಿದ್ರು ಅಮ್ಮಾ, ನನ್ನ ಹುಡುಕ್ಕೊಂಡು..."

ಕೈಜಾರಿ ಬೀಳಲಿದ್ದ ಫೋನನ್ನು ಸಾವರಿಸಿ ಹಿಡಿದುಕೊಂಡಳು ಸರೋಜ.

"ಅರ್ಥ ಆಯ್ತು ಬಿಡು. ಅಪ್ಪ ಬಂದಿದ್ದಕ್ಕೆ ಅಮ್ಮ ಮರೆತು ಹೋದ್ಲು. ಅವರೇ ಹೆಚ್ಚಾಗಿಬಿಟ್ರು. ಯಾವ ಪುಣ್ಯಾತ್ಮರು ವಿಳಾಸ ಕೊಟ್ರೋ?"

"ಹೇಗೋ ಪತ್ತೆ ಮಾಡಿರ್ತಾರೆ."

"....."

"ಅಮ್ಮಾ"

"....."

"ಯಾಕೆ ಮಾತಾಡ್ತಿಲ್ಲ, ಸಿಟ್ಟಾ?"

"....."

"ಸತ್ಯ ಹೇಳ್ತೀನಿ ಅಮ್ಮಾ, ಅಪ್ಪ ಅದೆಷ್ಟು ಪ್ರೀತಿಯಿಂದ ಮಾತಾಡಿಸ್ಕೊಂಡು ಬಂದಿದ್ರು ಅಂದ್ರೆ ಇಷ್ಟು ವರ್ಷ ಅವರಿಂದ ದೂರ ಇದ್ನಲ್ಲಾ ಅಂತ ಬೇಜಾರಾಗಿದ್ದು ಹೌದು."

"....."

"ಒಂಥರಾ ಮಾನಸಿಕ ತೊಳಲಾಟ. ಯಾರು ಸರಿ, ಯಾರು ತಪ್ಪು ಅನ್ನೋ ದ್ವಂದ್ವ."

"ನಾನು ಸರಿಯಿಲ್ಲ ಕಣೇ, ಗೊತ್ತಲ್ಲ ನಿಂಗೆ..."

"ಸಾರೀ ಅಂದ್ನಲ್ಲ ಅಮ್ಮಾ, ನನ್ನ ಮನಸ್ಸು ಸರಿಯಾಗೋಕೆ ಒಂದಿಷ್ಟು ಟೈಂ ಬೇಕಾಯ್ತು. ಆಗ ಯಾರ ಸಾವಾಸಾನೂ ಬೇಡ ಅನ್ನಿಸ್ಬಿಟ್ಟಿತ್ತು.."

"ಆಯ್ತು, ಬಿಟ್ಬಿಡು. ಒಬ್ಬಳೇ ಇದ್ದು ಅಭ್ಯಾಸ ಆಗಿದೆ ನಂಗೆ. ನಿಮ್ಮಪ್ಪ ಭರ್ತಿ ದುಡ್ಡು ಮಾಡಿಟ್ಟಿರ್ತಾರೆ. ಈ ಬಡಪಾಯಿ ಅಮ್ಮ ಯಾವ ಲೆಕ್ಕ?"

"ದುಡ್ಡಿಗೆ ಬಾಯಿ ಕಳ್ಕೊಂಡು ನಿನ್ನ ಬಿಟ್ಬಿಡ್ತೀನಾ? ನಮ್ಮಪ್ಪಂಗೆ ಒಬ್ಬ ಮಗ ಇದ್ನಂತೆ. ಇತ್ತೀಚೆಗೆ ಆಕ್ಸಿಡೆಂಟಲ್ಲಿ ಹೋಗ್ಬಿಟ್ನಂತೆ..."

"....."

"ಅದಕ್ಕೇ ನಮ್ಮಪ್ಪಂಗೆ ಮಗಳ ನೆನಪಾಯ್ತು ಅಂತ ಆಮೇಲೆ ನಂಗೂ ಅನ್ನಿಸೋಕೆ ಶುರುವಾಯ್ತು. ಇಲ್ದಿದ್ರೆ ಇಷ್ಟು ವರ್ಷ ಯಾಕೆ ನೆನಪಾಗ್ಲಿಲ್ಲ ಈ ಮಗಳು? ಪಾಪಪ್ರಜ್ಞೆ ಅಂತಾರಲ್ಲ, ಅಂತಾದ್ದೇನೋ ಕಾಡೋಕೆ ಶುರುವಾಗಿರ್ಬೇಕು ಅಪ್ಪಂಗೆ..."

"ಮಾಡಿದೋರು ಉಣ್ತಾರೆ ಮಣೆಯಂತಾ ಕಡುಬು. ಬಾಯಲ್ಲಿ ಹೇಳಿ ನಾವ್ಯಾಕೆ ಪಾಪ ಕಟ್ಕೋಬೇಕು?"